Leave of Absence to the Members.

Mr. SPEAKER.—I have received a letter from Sri M. Y. Ghorpade, a member of this House, requesting leave of absence from attending the sittings of the Assembly from the 23rd June 1964 for the rest of the sittings in view of his visit to new Delhi, in connection with Planning Commission's Advisory Committee and Consultative Council on Panchayati Raj.

Is it the pleasure of the House that permission be granted to Sri M. Y. Ghorpade, for being absent from attending the rest of the sittings of the Assembly ?

HON'BLE MEMBERS.—Yes.

Mr. SPEAKER.—Permission to remain absent is granted to the member. I have received another letter from Sri P. B. Bommanna, a member of this House, requesting leave of absence from attending the sittings of the Assembly from the 25th June, 1964 for the rest of the sittings due to his ill-health.

Is it the pleasure of the House that permission be granted to Sri P. B. Bommanna, for being absent from attending the rest of the sittings of the Assembly ?

HON'BLE MEMBERS.—Yes.

Mr. SPEAKER.—Permission to remain absent is granted to the member.

Members' Representations

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ನಾನು ಶರಾವತಿ ಶ್ವೇತಪತ್ರದ ಮೇಲೆ ಚರ್ಚೆಗೆ ಅವಕಾಶಮಾಡಿಕೊಡಬೇಕು ಎಂದು ಹೇಳಿದ್ದೆ. ಆ ವಿಚಾರದಲ್ಲಿ ತಾವು ಏನು ತೀರ್ಮಾನ ಮಾಡಿದ್ದೀರೋ ಎಂಬುದು ನನಗೆ ಗೊತ್ತಾಗಲಿಲ್ಲ. ಇನ್ನೊಂದು ವಿಷಯ. ಕೊಂಡಜ್ಜಿ ಬಸಪ್ಪನವರ ವರದಿಯನ್ನು ಇಲ್ಲಿ ಚರ್ಚೆಮಾಡಿ ಆ ಒಂದು ಚರ್ಚೆಯ ಬೆಳಕಿನಲ್ಲಿ ಈ ಗ್ರಾಮ ಪಂಚಾಯಿತಿ ರಾಜ್ಯ ಮಸೂದೆಯನ್ನು ರೂಪಿಸಬೇಕೆಂಬ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೆವು, ಅದರ ಜೊತೆಗೆ ಶ್ರೀಮಾನ್ ಘೋರ್ಪಡೆಯವರು ಒಂದು ನೋಟನ್ನು ಬೇರೆ ಕೊಟ್ಟರು. ತಾವು ಮೊನ್ನೆ ತಾನೇ ಈ ಎರಡು ವಿಚಾರಗಳ ಮೇಲೆ ಚರ್ಚೆ ನಡೆಯಬೇಕೆಂದು ಅಪ್ಪಣೆ ಕೊಡಿಸಿದ್ದಿರಿ. ಈಗ ಸಲಹಾ ಸಮಿತಿಯ ತೀರ್ಮಾನದ ಪ್ರಕಾರ ಮಸೂದೆಯ ಚರ್ಚೆಗೆ ಹದಿಮೂರುವರೆ ಘಂಟೆಗಳ ಕಾಲಾವಕಾಶ ಕೊಟ್ಟಿದ್ದೀರಿ. ಇದು ಏಕೆ ಹೀಗಾಯಿತೋ ಗೊತ್ತಾಗಲಿಲ್ಲ. ಅಥವಾ ಕೊಂಡಜ್ಜಿ ಬಸಪ್ಪನವರ ಸಮಿತಿ ವರದಿ ಉಪಯುಕ್ತವಲ್ಲವೆಂದು ಸರ್ಕಾರದವರು ಈ ರೀತಿ ಮಾಡಿದ್ದಾರೋ ಅಥವಾ ಅದನ್ನು ಚರ್ಚಿಸುವುದರಿಂದ ಏನಾದರೂ ತೊಂದರೆ ಬರುತ್ತದೋ ಎಂದು ನಿಧಾನಮಾಡಿದ್ದಾರೋ ನನಗೆ ಗೊತ್ತಾಗಲಿಲ್ಲ.

1-00 P.M.

ಶರಾವತಿಯ ಶ್ವೇತಪತ್ರದ ಬಗ್ಗೆ ಈ ಅಧಿವೇಶನದಲ್ಲಿ ಚರ್ಚೆ ಆಗದೇ ಹೋದರೆ ಮುಂಚೆ ಚರ್ಚೆಯಾಗಿ ಏನೂ ಪ್ರಯೋಜನವಿಲ್ಲ ಎಂದು ಅನಿಸುತ್ತದೆ. ಆ ವಿಷಯವನ್ನು ಚರ್ಚೆ ಮಾಡಲು ಈಗಾಗಲೇ ಕಾಲವಿಳಂಬವಾಗಿದೆ. ಇಂಥ ವಿಷಯಗಳನ್ನು ಚರ್ಚೆ ಮಾಡುವುದರಲ್ಲಿ ವಿಳಂಬ ಮಾಡುವುದು ಸರಿಯಲ್ಲ. ಆ ರೀತಿ ವಿಳಂಬ ಮಾಡುವುದಾದರೆ ಮುಂದೆ ಇನ್ನಷ್ಟು ಆಕ್ಷೇಪಗಳಿಗೆ ಎಡೆ ಕೊಡಬಹುದು. ಆದ್ದರಿಂದ ಈ ಅಧಿವೇಶನದಲ್ಲೇ ಶರಾವತಿಯ ಶ್ವೇತಪತ್ರದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ.